## ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

**ವಿಶೇಷ ಮೊಕದ್ದಮೆ ಸಂಖ್ಯೆ- 816/2021**

**ಪ್ರಾಸಾಃ- 18 ಚಾಸಾಃ- 33**

| | | |
|---|---|---|
| ಸಾಕ್ಷಿಯ ಹೆಸರು | : | ಗುರುಗೋವಿಂದಸಿಂಗ್ |
| ತಂದೆಯ ಹೆಸರು | : | ಬಿ. ಎಸ್. ಮೋತಿಸಿಂಗ್ |
| ವಯಸ್ಸು | : | 53 ವರ್ಷ |
| ವೃತ್ತಿ | : | ಬೀಗದ ಕೆಲಸ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 13.1.2025

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ನಾನು 25 ವರ್ಷಗಳಿಂದ ಮನೆ ಬೀಗ ರಿಪೇರಿ ಕೆಲಸ ಮಾಡುತ್ತೇನೆ. ಪೋಲೀಸರು ನನ್ನನ್ನು ಮೂರು ಮೂರೂವರೆ ವರ್ಷಗಳ ಹಿಂದೆ ಒಬ್ಬರ ಮನೆ ಬೀಗ ತೆಗೆಯಲು ಬಳ್ಳಾರಿಯ ಮನೆಗೆ ಕರೆಸಿದ್ದರು. ಸದರಿ ಮನೆಯ ಬೀಗವನ್ನು ನಾನು ತೆಗೆದಿರುತ್ತೇನೆ. ರಾಮಲಕ್ಷ್ಮಿ ಮತ್ತು ಜಯಮ್ಮ ರವರ ಹೆಸರು ಮತ್ತು ಅವರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ಆರೋಪಿಯು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

2. ದಿಃ 1-7-2021 ರಂದು ಪೋಲೀಸರು ನನ್ನನ್ನು ಕರೆಸಿ ಬೆಳಿಗ್ಗೆ 10-45 ಗಂಟೆಗೆ ಮೃತ ರಾಮಲಕ್ಷ್ಮಿ ಮತ್ತು ಜಯಮ್ಮ ರವರ ಮನೆಯನ್ನು ಚಾಸಾ 1 ರವರು ತೋರಿಸಿದಂತೆ ಬಾಗಿಲು ಬೀಗ ಹಾಕಿದ್ದದನ್ನು ಪೋಲೀಸರು ಹೇಳಿದಂತೆ ನಾನು ತೆಗೆದಿದ್ದೆ ಎಂದರೆ ಸರಿಯಲ್ಲ. ಸಾಕಿಕ್ಷಯು ಮುಂದುವರೆದ ಯಾವ ಮನೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಒಂದು ಮನೆಯ ಬೀಗ ತೆಗೆದಿರುತ್ತೇನೆ. ಆರೋಪಿತರು

ರಾಮಲಕ್ಷ್ಮಿ ಮತ್ತು ಜಯಮ್ಮಳ ಕೊಲೆ ಮಾಡಿದ ಕಾರಣಕ್ಕಾಗಿ ಮೃತರ ಮನೆಯನ್ನು ಶೋಧನೆ ಮಾಡಲು ನನ್ನ ಮುಖಾಂತರ ಬೀಗ ತೆಗೆಸಿದ್ದರು ಎಂದು ಈಗ ಓದಿ ಹೇಳಿದಂತೆ ದಿಃ 16-6-2021 ರಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-60 ಎಂದು ಗುರುತಿಸಲಾಯಿತು. ನಿಪಿ-60 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಪಿ ಮತ್ತು ಎಸ್ ಆರ್ ಎಸ್ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ- 816/2021**

**ಫ್ರಾಸಾ- 19 ಚಾಸಾ- 35**

| | | |
|---|---|---|
| ಸಾಕ್ಷಿಯ ಹೆಸರು | : | ನಿಜಾಮ್ ಭಾಷಾ |
| ತಂದೆಯ ಹೆಸರು | : | ಹಸ್ಸೇನ್ ಸಾಬ್ |
| ವಯಸ್ಸು | : | 38 ವರ್ಷ |
| ವೃತ್ತಿ | : | ಅಕ್ಕಸಾಲಿಗ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ- 13.1.2025

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಪೋಲೀಸರು ನನ್ನನ್ನು 3-4 ವರ್ಷಗಳ ಹಿಂದೆ ಫೆಡ್ ಬ್ಯಾಂಕ್‌ಗೆ ಕರೆಸಿದ್ದರು. ಸದರಿ ಬ್ಯಾಂಕ್‌ನಲ್ಲಿ ಒತ್ತೆ ಇಟ್ಟಿದ್ದ ಬಂಗಾರದ ತೂಕ ಮಾಡಲು ಕರೆಸಿದ್ದರು. ನಾನು ಎರಡು ಸರಗಳನ್ನು ನಾನು ತೂಕ ಮಾಡಿ ಕೊಟ್ಟಿರುತ್ತೇನೆ. ಸದರಿ ಸರಗಳನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಮುದ್ದೆ ಮಾಲುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವುದರಿಂದ ಅವುಗಳ ಗುರುತಿಸುವಿಕೆ ಕಾರಣಕ್ಕಾಗಿ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.